# ಭಾನುವಾರದ ಸಂತೆ

ನಮ್ಮ ಏರಿಯಾದಲ್ಲಿ ವಾರವೂ ಬಿಡದ ಸಂತೆ.
ಜನರ ಕಲರವ
ಸಂಜೆ ಸೇರುವ ಕಾಗೆಗಳ ಥರ...

ಸಂತೆಯಲ್ಲಿ ವಿಧವಿಧದ ವೇಷ ಬಣ್ಣ.
ಆಗ ತಾನೇ ಬಸಿದ ಜೇನು
ಬುಟ್ಟಿಯಲ್ಲಿ ಪರಿಮಳ ಸೂಸುವ ಒಣ ಮೀನು;
ಅತ್ತ ಹಲಸು ಮಾವುಗಳ ಘಮ
ಇತ್ತ ಕಡೆ ಬಗೆ ಬಗೆಯ ಸುಮ

ವಿಶಿಷ್ಟ, ವಿಚಿತ್ರ ಜನ.
ಕಾಯಿಪಲ್ಲೆ ಕೊಂಡುಕೊಂಡ ನಾರಿ;
ಬೇಕಂತಲೇ ಸೆರಗು ಜಾರಿಸುವ ವಯ್ಯಾರಿ
ಹಸುಗೂಸಿಗೆ ಹಾಲುಣಿಸುವ ವ್ಯಾಪಾರಿ
ಜನರ ಅಳೆದು ತೂಗಿ ಬೆಲೆ ಹೇಳುವ ಪರಿ.

ಸಂತೆಯಲಿ ಇದೆಯೇ ಚಿಂತೆ?
ಮಾರಾಟದ ಮುದುಕಿಯ ಮುಖದ ತುಂಬ
ಎಣಿಸಲಾಗದ ನೆರಿಗೆ
ಗೆರೆಗೆರೆಗೂ ಕೇಳಿ ಕತೆ ಉಪಕತೆ
ಮಾಸಿದ ಹಲ್ಲುಗಳ ಮಧ್ಯೆ
ಬಾಯಿತುಂಬಾ ನಗೆ.

ವಾರವಾರವೂ ನಡೆವ
ಈ ಸಂತೆ ನನಗೆ...
ಮಾಸ್ತರೇ ಇಲ್ಲದ
ಶಾಲೆಯಂತೆ...

● **ಕಲಾವತಿ ಆರ್.**



ವಾಗೀಶ ಹೆಗಡೆ